ಖಾಲಿ ಇರುವ ೧೩೮೪ ಡಿ ದರ್ಜೆ ಹುದ್ದೆಗಳನ್ನು ಇತರೆ ಇಲಾಖೆಗಳಿಂದ ಮರುವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥದ ಮೂಲಕ ಭರ್ತಿ ಮಾಡಲು ಕ್ರಮ. ತೆಗೆದುಕೊಳ್ಳಲಾಗುತ್ತದೆ.

<u>ಗದಗ ತಾಲ್ಲೂಕು ಹರ್ಲಾಪೂರ ಮಸೀದಿಗೆ ಅನುದಾನ ಮಂಜೂರಾಗಿರುವುದು.</u>

೩೭೫೫ (೪೦೭೭) **ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ)** :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಹರ್ಲಾಪುರ ಹಾಗೂ ಬಾಗೇವಾಡಿ ಗ್ರಾಮದ ಮಸೀದಿಗಳಿಗೆ ಮಂಜೂರಾಗಿದ್ದ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಿದ್ದು ಸದರಿ ಹಣವನ್ನು ಬಿಡುಗಡೆ ಮಾಡಲಾಗಿದೆಯೇ;

ಆ) ಬಿಡುಗಡೆ ಮಾಡದ್ದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಮೆರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಯಾವ ಪ್ರಸ್ತಾವನೆಯೂ ಬಾರದೇ ಇರುವ ಕಾರಣ ಹಣ ಮಂಜೂರು ಮಾಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

೩೮೪೪ (೪೭೬೬) **ಶ್ರೀ ಅಲ್ಕೋಡ್ ಹನುಮಂತಪ್ಪ. ವೈ (ದೇವದುರ್ಗ)** :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಗೆ ಕಳೆದ ೩ ವರ್ಷಗಳಿಂದ ವಿವಿಧ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು? ತಾಲ್ಲೂಕುವಾರು ವಿವರ ನೀಡುವುದು;

ಆ) ರೇಷ್ಮೆ ಇಲಾಖೆಯಲ್ಲಿ ಇರುವ ಯೋಜನೆಗಳಾವುವು ; (ಪೂರ್ಣ ವಿವರಗಳೊಂದಿಗೆ ನೀಡುವುದು);

ಇ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ ಕಳೆದ ೩ ವರ್ಷಗಳಿಂದ ಯಾವ ಯಾವ ಯೋಜನೆಗಳ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಮಂಜೂರಾದ ಹಣವೆಷ್ಟು; ಖರ್ಚಾದ ಮತ್ತು ಉಳಿದ ಹಣವೆಷ್ಟು; (ವರ್ಷಾವಾರು ಯೋಜನೆವಾರು ಲೆಕ್ಕ ಶೀರ್ಷಿಕೆ ನೀಡುವುದು);